ಭರಣ ಮಾಡಲಾಗುತ್ತಿದೆ. ಹಾಗೂ ಇ.ಪಿ.ಗಳನ್ನು ಮುಕ್ತಾಯ ಮಾಡಿಸಲು ಸರಕಾರಿ ವಕೀಲರು/ನಿಗಮದ ವಕೀಲರ ಮುಖಾಂತರ ಕ್ರಮ ಜರುಗಿಸಲಾಗುತ್ತಿದೆ.

ಊ) ಬಂದಿದೆ.

ಸದರಿ ಕಛೇರಿಯ ಜಪ್ತಿಗೆ ಮುಖ್ಯ ಕಾರಣಗಳು ಈ ಕೆಳಕಂಡಂತಿವೆ:

1. ಈಗಾಗಲೇ ನ್ಯಾಯಾಲಯಕ್ಕೆ ಹಣ ಭರಣವಾದ ಇ.ಪಿ. ಪ್ರಕರಣಗಳಲ್ಲಿ ಸದರೀ ಭರಣವಾದ ಮೊತ್ತವನ್ನು ಕಡಿಮೆಯೆಂದು ನ್ಯಾಯಾಲಯವು ಪರಿಗಣಿಸಿದ್ದರಿಂದ ಪುನಃ ಜಪ್ತಿ ವಾರಂಟ್ ಆದೇಶಗಳು ಜಾರಿಯಾಗಿವೆ.

2. ನ್ಯಾಯಾಲಯಗಳ ತೀರ್ಪುಗಳ ಕುರಿತು ಕಾನೂನು ಇಲಾಖೆಯ ಪರಿಶೀಲನೆಯಲ್ಲಿದ್ದು, ಅದರ ಅಭಿಪ್ರಾಯ ನಿರೀಕ್ಷಣೆಯಲ್ಲಿರುವುದರಿಂದ.

ಋ) ಘಟಪ್ರಭಾ ಯೋಜನೆಯನ್ನು ಡಿಸೆಂಬರ್ 2006ರ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಯೋಜನೆಯ ಅಂಗವಾದ ರುಸ್ತುಂಪೂರ ಏತ ನೀರಾವರಿ ಯೋಜನೆಗಾಗಿ 2005–06ನೇ ಸಾಲಿಗಾಗಿ ರೂ. 487.97 ಲಕ್ಷ ಅನುದಾನ ಕಲ್ಪಿಸಲಾಗಿದ್ದು, ಇದನ್ನು ಡಿಸೆಂಬರ್ 2005ರ ಒಳಗಾಗಿ ಪೂರ್ಣಗೊಳಿಸಲು ಯೋಚಿಸಲಾಗಿದೆ.

ವಿದ್ಯುತ್ ಸಂಪರ್ಕ ನೀಡುವಲ್ಲಿನ ವಿಳಂಬ ಹಾಗೂ ರೇಲ್ವೆ ಕ್ರಾಸಿಂಗ್ ಕಾಮಗಾರಿಯನ್ನು ರೇಲ್ವೆ ಇಲಾಖೆಯವರು ಮಾಡಬೇಕಾಗಿದ್ದರಿಂದ, ಸದರಿ ಕಾಮಗಾರಿಯಲ್ಲಿ ಸ್ವಲ್ಪ ವಿಳಂಬವಾಗಿದ್ದು ಈ ಕಾಮಗಾರಿಯು ಈಗ ಪೂರ್ಣಗೊಂಡಿದೆ.

5428(6036) ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊನ್ನಾವರಕ್ಕೆ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ:

ಆ) ಹೊನ್ನಾವರ ತಾಲ್ಲೂಕಿನ ಕೇಂದ್ರ ಬಿಂದುವಾದ ಹೊನ್ನಾವರದಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಇ) ಯಾವ ಭಾಗದಲ್ಲಿ ಪ್ರಾರಂಭಿಸಲು ಸರ್ಕಾರ ಜಮೀನು ಕಾಯ್ದಿರಿಸಿದೆ:

ಈ) ಮಂಜೂರು ಮಾಡಿರುವ ಸಿಬ್ಬಂದಿಗಳ ವಿವರ ಒದಗಿಸುವುದು:

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ,ಆ) ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಭಟ್ಕಳ, ಶಿರಸಿಯಲ್ಲಿ ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತವೆ. ಕುಮಟಾದಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಸಿಬ್ಬಂದಿ ವಾಹನ ಮತ್ತು ಉಪಕರಣಗಳನ್ನು ಮಂಜೂರು ಮಾಡಿದೆ. ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಈ ಇಲಾಖೆಯ ಸರ್ವೋತೋಮುಖ ಬೆಳವಣಿಗೆಗೆ ಮತ್ತು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಹಂತ ಹಂತದಲ್ಲಿ ಬರುವ 5 ವರ್ಷಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಒಂದು ಬೃಹತ್ ಯೋಜನೆಯನ್ನು (K-SAFE 2010) ತಯಾರಿಸಿದು, ಈ ಯೋಜನಯು ಪರಿಶೀಲನೆಯಲ್ಲಿದೆ. ಇದರಂತೆ ಹೊನ್ನಾವರ ತಾಲ್ಲೂಕು ಕೇಂದ್ರದಲ್ಲಿಯೂ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದು.

ಇ) ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸುವ ಮೊದಲು ನಿವೇಶವನ್ನು ಪಡೆಯಲು ಕ್ರಮ ಕೈಗೊಳ್ಳಲಾಗುವುದು.

ಈ) ಅಗ್ನಿಶಾಮಕ ಠಾಣೆಯ ಮಂಜೂರಾತಿ ಸಮಯದಲ್ಲಿ ಸಿಬ್ಬಂದಿಯ ಬಗ್ಗೆ ಆದೇಶ ಹೊರಡಿಸಲಾಗುವುದು.

5429(6037) ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊನ್ನಾವರಕ್ಕೆ ಬಸ್ ಡಿಪೋವನ್ನು ಸರ್ಕಾರ ಮಂಜೂರಾತಿ ಮಾಡಿದೆಯೇ;

ಆ) ಹಾಗಿದ್ದಲ್ಲಿ, ಬಸ್ ಡಿಪೋಗೆ ಬೇಕಾಗುವ ಜಮೀನನ್ನು ಸರ್ಕಾರ ಯಾವ ಭಾಗದಲ್ಲಿ ಖರೀದಿಸಿದೆ;

ಇ) ಬಸ್ ಡಿಪೋ ಯಾವಾಗ ಕಾರ್ಯರಂಭವಾಗುವುದು;

ಈ) ಭಟ್ಕಳ ಮತ್ತು ಹೊನ್ನಾವರದಿಂದ ಬೆಂಗಳೂರಿಗೆ ಐರಾವತ ಬಸ್ ಬಿಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಯಾವ ದಿನದಿಂದ ಐರಾವತ ಬಸ್ಸನ್ನು ಕ್ರಮಿಸಲು ಪ್ರಾರಂಭಿಸಲಾಗುತ್ತದೆ; (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

5430(6258) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಸವನಬಾಗೇವಾಡಿ ಪಟ್ಟಣಕ್ಕೆ ಕೃಷ್ಣಾನದಿ ಮೂಲದಿಂದ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆಯೇ ಹಾಗೂ ನೀರಿನ ಸಾಮರ್ಥ್ಯ ಎಷ್ಟು (MGD);

ಆ) ಬಸವನಬಾಗೇವಾಡಿ ಪಟ್ಟಣ ಪಂಚಾಯಿತಿ ಬಸವಣ್ಣನವರ ಜನ್ಮ ಸ್ಥಳವಾಗಿದ್ದು, ಸದರಿ ಪಟ್ಟಣವು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಅಧೀನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲದೆ ಇರುವುದರಿಂದ ಸಾರ್ವಜನಿಕರು ಮೇಲಿಂದ ಮೇಲೆ ಮಲೇರಿಯಾಕ್ಕೆ ತುತ್ತಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಬಸವನಬಾಗೇವಾಡಿ ಪಟ್ಟಣ ಪಂಚಾಯಿತಿ ಒಳಚರಂಡಿ ವ್ಯವಸ್ಥೆಯನ್ನು ಯಾವ ಕಾಲ ಮಿತಿಯಲ್ಲಿ ಸರ್ಕಾರ ನಿರ್ವಹಿಸಿಕೊಡುವುದಕ್ಕೆ ಕಾಲಮಿತಿ ನಿಗದಿ ಪಡಿಸಲಾಗಿದೆಯೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ) ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸದರಿ ಯೋಜನೆಯ ನೀರಿನ ಸಾಮರ್ಥ್ಯವು 1.55 ಎಂ.ಜಿ.ಡಿ.

ಆ) ಬಂದಿದೆ

ಇ) ಇಲ್ಲ